ಓಎಸ್. 204/2020 ಪಿಡಬ್ಲ್ಯೂ3

ದಿನಾಂಕಃ 10.02.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಸ್ ಜಿ ಎಸ್ ವಕೀಲರಿಂದಃ

ಕ್ರಯದ ಕರಾರಿಗೆ ನಾನು ಸಹಿ ಮಾಡಿದ್ದು ಈ ದಿನ ಸಾಕ್ಷ್ಯನುಡಿಯಲು ಬಂದಿದ್ದೇನೆ. ನಿಪಿ 1 ನ್ನು ಬಾಲು ವಕೀಲರ ಆಫೀಸಿನಲ್ಲಿ ಬರೆಯಲಾಗಿರುತ್ತದೆ. ಮಧ್ಯಾಹ್ನ 1.30 ಗಂಟೆಗೆ ನಾವು ವಕೀಲರ ಕಚೇರಿಗೆ ಹೋಗಿರುತ್ತೇವೆ. ಆ ಸಮಯದಲ್ಲಿ ವಾದಿಯು ಪ್ರತಿವಾದಿಗೆ ರೂ.1,00,000/- ಗಳನ್ನು ನೀಡಿರುತ್ತಾರೆ. ಸದರಿ ನಗದು ಹಣದ ಮುಖಬೆಲೆ ರೂ,500/-ಗಳದ್ದಾಗಿತ್ತು.

ವಾದಿ ನಮ್ಮ ಊರಿನವರು ಎಂದರೆ ಸರಿ. ಕ್ರಯದ ಕರಾರಿನಲ್ಲಿ ಕಾಣಿಸಿದ ಅನುಸೂಚಿ ಸ್ವತ್ತಿನ ಕುರಿತು ನನಗೆ ಮಾಹಿತಿ ಇರುವುದಿಲ್ಲ. ಸದರಿ ಸ್ವತ್ತು ಯಾರ ಮಾಲೀಕತ್ವದಲ್ಲಿರುತ್ತದೆ ಎಂದರೆ ನನಗೆ ಮಾಹಿತಿ ಇರಲಿಲ್ಲ. ನಾನು ಕಚೇರಿಗೆ ಹೋದ ನಂತರ ನಿಪಿ 1 ನ್ನು ತಯಾರಿಸಲಾಗಿರುತ್ತದೆ. ನಿಪಿ 1 ರಲ್ಲಿ ನನ್ನ ಸಹಿ ಮಾಡಿರುವ ಜಾಗದಲ್ಲಿ ಗುರುತು ಮಾಡಲಾಗಿದೆ ಎಂದರೆ ಸರಿ. ನಾನು ನಿಪಿ 1 ನ್ನುಬ ರೆಯುವಾಗ ಹಾಜರು ಇರದ ಕಾರಣ ಸಹಿ ಮಾಡುವ ಸ್ಥಳವನ್ನು ಗುರುತು ಮಾಡಿ ದಾಖಲೆಯನ್ನು ನನ್ನ ಬಳಿಗೆ ಕಳುಹಿಸಲಾಗಿತ್ತು ಎಂದರೆ ಸರಿಯಲ್ಲ. ಕ್ರಯದ ಕರಾರು ಆದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನನ್ನ ಸಮಕ್ಷಮ ವಾದಿ ಪ್ರತಿವಾದಿಗೆ ಹಣ ನೀಡರುತ್ತಾರೆ ಎಂದು ನುಡಿಯುತ್ತಾರೆ. ಹಣ ನೀಡಿದ ವಿಚಾರ ಹೊರತು ಪಡಿಸಿ ಕ್ರಯದ ಕರಾರಿನ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.